

# ಅಬ್ಬಾ.. ಮರ!

ಎಷ್ಟೊಂದು ದಪ್ಪನೆಯ ಕಾಂಡ! ಅದರಲ್ಲೂ ಆ ಕಾಂಡದಲ್ಲಿ ಇಷ್ಟೊಂದು ಪ್ರಾಣಿಗಳು ಅದ್ಹೇಗೆ ಜೀವ ತಳೆದಿವೆ!?

ತಟ್ಟನೆ ನೋಡಿದಾಗ ದಪ್ಪ ಕಾಂಡವುಳ್ಳ, ಕೊಂಬೆಗಳ ತುಂಬಾ ಹಸಿರೆಲೆಗಳನ್ನು ಹೊದ್ದ ಈ 145 ಅಡಿ ಎತ್ತರದ ಮರ ನಿಮ್ಮನ್ನು ಮೋಸಗೊಳಿಸುವುದು ಖಂಡಿತಾ. 'ಮೋಸ' ಏನೆಂದರೆ, ಇದು ನೈಜ ಮರ ಅಲ್ಲ!

ಹತ್ತಿರದಿಂದ ಅವಲೋಕಿಸಿದಾಗ ಮರದ ಕಾಂಡದ ತುಂಬಾ ಆಮೆ, ಮೊಸಳೆ, ನೀರಾನೆ, ಎಮ್ಮೆ, ಹದ್ದು, ಹುಲಿ ಮೊದಲಾದ 325 ಅಳಿದ ಹಾಗೂ ಉಳಿದ ಪ್ರಾಣಿಗಳ ಕೆತ್ತನೆಗಳು ಕಾಣಿಸುತ್ತವೆ. ಫ್ಲೋರಿಡಾದ ಅನಿಮಲ್ ಕಿಂಗ್‌ಡಮ್ ಪಾರ್ಕಿನ ಚಿನ್ಹೆ ಇದು. ಕಲಾವಿದರು ಪರಿಪೂರ್ಣ ಶ್ರಮ ಹಾಕಿ ಈ ಮರವನ್ನು ನಿಲ್ಲಿಸಿ, ಕಾಂಡದಲ್ಲಿ ಕೈಚಳಕ ತೋರಿದ್ದಾರೆ. ಗಾಳಿ ಬೀಸುವಾಗ ಹೊಯ್ದಾಡುವ ರೆಂಬೆ, ನೈಜವಾಗಿ ಕಾಣುವ ಕಾಂಡ, ಬೇರು, ಬೊಡ್ಡೆಗಳು ಎಂಥವರನ್ನೂ ಮೋಸಗೊಳಿಸುತ್ತವೆ. ಈ ಮರಕ್ಕೆ 'ಟ್ರೀ ಆಫ್ ಲೈಫ್' ಎಂದೇ ಹೆಸರಿಟ್ಟಿದ್ದಾರೆ.

■ ವಿದ್ಯಾ ಹಾಲಭಾವಿ

